# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಕುಲಸಚಿವರು(ಪರೀಕ್ಷಾಂಗ)ರವರಕಛೇರಿ, ಶ್ರೀದೇವರಾಜ್‌ಅರಸ್ ಬಡಾವಣೆ, ಟಮಕ,

ಕೋಲಾರ– ೫೬೩ ೧೦೩.

ಸಂಖ್ಯೆ:ದಾವಿ/ಪವಿ/ಯು.ಜಿ/೨೦೧೮-೧೯ ದಿನಾಂಕ: ೦೫/೧೧/೨೦೧೮

## ಪ್ರಕಟಣೆ

**ವಿಷಯ:**ನವೆಂಬರ್/ಡಿಸೆಂಬರ್-೨೦೧೮ರಲ್ಲಿ ನಡೆಯುವ ಬಿ.ಎ./ಬಿ.ಎಸ್ಸಿ/ಬಿ.ಕಾಂ/ಬಿ.ಬಿ.ಎ/ಬಿ.ಸಿ.ಎ ಬಿ.ಎಸ್.ಎ/ಬಿ.ಎಸ್.ಡಬ್ಲ್ಯೂ/ಬಿ.ವಿ.ಎ/ಬಿ.ಎಫ್.ಡಿ.೧ನೇಸೆಮಿಸ್ಟರ್‌ರೆಗ್ಯುಲರ್ ಪರೀಕ್ಷೆಗಳಿಗೆ ಅರ್ಜಿಸಲ್ಲಿಸುವ ಹಾಗೂ ಶುಲ್ಕ ಪಾವತಿಸುವಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: ೦೨.೧೧.೨೦೧೮

****

ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯವು ಪರೀಕ್ಷಾ ಸುಧಾರಣೆಗೆ ಸಂಬಂಧಪಟ್ಟಂತೆ ಮತ್ತು ಪರೀಕ್ಷಾ ಕಾರ್ಯಗಳನ್ನು ವಿದ್ಯಾರ್ಥಿ ಸ್ನೇಹಿಯನ್ನಾಗಿ ಮಾಡಲು ಮಾಹಿತಿ ತಂತ್ರಜ್ಞಾನಗಳನ್ನು ಅಳವಡಿಸುತ್ತಿದೆ. ಈ ಸಂಬಂಧವಾಗಿ ಕಾಲೇಜುಗಳು ಹಾಗೂ ವಿದ್ಯಾರ್ಥಿಗಳಿಗೆ ಮಾಹಿತಿಗಳು / ಸಂದೇಶಗಳನ್ನು ಗಣನೀಯವಾಗಿ Web Portal / Mobile App ಮುಖಾಂತರ ನಿಗದಿತ ಕಾಲಕ್ಕೆ ತಲುಪಿಸಲು ಸಹಕಾರಿಯಾಗುತ್ತದೆ. ೨೦೧೮-೧೯ನೇ ಸಾಲಿನ ಮೊದಲನೆ ಸೆಮಿಸ್ಟರ್ ಪರೀಕ್ಷೆಗಳ ಪರೀಕ್ಷಾ ಶುಲ್ಕವನ್ನುಡಿಜಿಟಲ್ ಮಾಧ್ಯಮದ ಮೂಲಕ ಅಥವಾ ವಿದ್ಯಾರ್ಥಿಗಳು ಪ್ರವೇಶ ಪಡೆದಿರುವ ಕಾಲೇಜುಗಳು ಈಗಾಗಲೇ ಗುರುತಿಸಿ ವ್ಯವಹರಿಸುತ್ತಿರುವಬ್ಯಾಂಕ್‌ಅಥವಾ ಲಭ್ಯವಿರುವ ಅಂಚೆ ಕಛೇರಿಅಥವಾಇತರೆಡಿಜಿಟಲ್ ಮಾಧ್ಯಮದ ಮೂಲಕ ಪರೀಕ್ಷಾ ಶುಲ್ಕವನ್ನು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ನಿಗದಿತಖಾತೆಗೆ ಸಂದಾಯ ಮಾಡಲು ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ.

ಈ ಎಲ್ಲಾ ಮೇಲೆ ತಿಳಿಸಿದ ಬದಲಾವಣೆಗಳು ನವೆಂಬರ್/ಡಿಸೆಂಬರ್ ೨೦೧೮ರಿಂದ (ಪ್ರಾಯೋಗಿಕ/ಲಿಖಿತ ಪರೀಕ್ಷೆಗಳು ಸೇರಿದಂತೆ) ಪ್ರಾರಂಬಗೊಳ್ಳುವ ಪರೀಕ್ಷೆಗಳಿಗೆ ಅನ್ವಯವಾಗುವುದು.

ಪ್ರಾಯೋಗಿಕ/ಲಿಖಿತಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ಪ್ರಾರಂಭಿಸಲಾಗುವುದು ಇದಕ್ಕೆ ಪೂರಕವಾದ ಇತರೆ ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ.

| ಕ್ರಮ ಸಂಖ್ಯೆ | ಪರೀಕ್ಷೆಗಳ ವಿವರ | ಪರೀಕ್ಷೆ ಪ್ರಾರಂಭವಾಗುವ ದಿನಾಂಕ |
|---|---|---|
| ೦೧ | ಪ್ರಾಯೋಗಿಕ ಪರೀಕ್ಷೆಗಳು<br>(ಬಿ.ಎಸ್ಸಿ., ಬಿ.ಸಿ.ಎ., ಬಿ.ಹೆಚ್.ಎಂ.,) | ೦೯.೧೧.೨೦೧೮ |
| ೦೨ | ಲಿಖಿತ ಪರೀಕ್ಷೆಗಳು | -ಶೀಘ್ರದಲ್ಲೆ ತಿಳಿಸಲಾಗುತ್ತದೆ- |

ಪರೀಕ್ಷೆ ತೆಗೆದುಕೊಳ್ಳಲು ನಿಯಮಾನುಸಾರ ವಿಶ್ವವಿದ್ಯಾಲಯದಿಂದಅನುಮೋದನೆ ಪಡೆದುಅರ್ಹರಾದವಿದ್ಯಾರ್ಥಿಗಳು ತಮ್ಮಅರ್ಜಿ ಮತ್ತು ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

ಪರೀಕ್ಷೆಯ ಪ್ರವೇಶಕ್ಕೆಅನುಮತಿಕೋರಿ ನಿಗದಿತ ಪರೀಕ್ಷಾ ಶುಲ್ಕವನ್ನು ಪಾವತಿಸಿ, ಸಂಬಂಧಿಸಿದ ದಾಖಲೆಗಳೊಡನೆ ಅರ್ಜಿ ಸಲ್ಲಿಸಿರುವ ದಿನಾಂಕ ಮತ್ತು ಪರೀಕ್ಷಾ ಶುಲ್ಕದ ವಿವರಗಳು ಈ ಕೆಳಕಂಡಂತಿವೆ.

## I ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳು

೧. ದಂಡುಶುಲ್ಕವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:೧೪.೧೧.೨೦೧೮.

೨. ದಂಡಶುಲ್ಕ ರೂ. ೨೦೦ರಂತೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ೧೬.೧೧.೨೦೧೮ (ಎಲ್ಲಾ ವರ್ಗದವರಿಗೂ ಅನ್ವಯ).

೩. ದಂಡಶುಲ್ಕ ರೂ ೧೦೦೦ರಂತೆ ದಿನಾಂಕ: ೧೭.೧೧.೨೦೧೮.

೪. ವಿದ್ಯಾರ್ಥಿಗಳಿಂದ ಪಡೆದ ಶುಲ್ಕವನ್ನು ವಿಶ್ವವಿದ್ಯಾಲಯದ ಖಾತೆಗೆ RTGS / NEFT ಮಾಡಲು ಕೋನೆಯ ದಿನಾಂಕ (ದಂಡ ರಹಿತ): ೨೦.೧೧.೨೦೧೮.

೫. ವಿದ್ಯಾರ್ಥಿಗಳಿಂದ ಪಡೆದ ಶುಲ್ಕವನ್ನು ವಿಶ್ವವಿದ್ಯಾಲಯದ ಖಾತೆಗೆ RTGS / NEFT ಮಾಡಲು ಕೋನೆಯ ದಿನಾಂಕ (ದಂಡ ಸಹಿತ): ೨೨.೧೧.೨೦೧೮.

## II ವಿವಿಧ ಪದವಿಗಳಿಗೆ ಅನ್ವಯವಾಗುವ ಪರೀಕ್ಷಾ ಶುಲ್ಕದ ವಿವರಗಳು

ಬೆಂಗಳೂರು ವಿಶ್ವವಿದ್ಯಾಲಯದ ಮಾದರಿ ಮತ್ತು ಅಂಗೀಕೃತ ಶುಲ್ಕದ ವಿವರಗಳು.

| 1 | 2 | 3 | 4 | 5 |
|---|---|---|---|---|
| COURSE | SEMESTER | WHOLE EXAMINATION FEE including Practical/ Viva-Voce/ Dissertation/Project (in Rs.) | Marks card fee – Rs.150/- Processing fee – Rs. 75/- (Including Scrutiny and e-Governance fee) | Total Fees |
| **FACULTY OF ARTS** | | | | |
| Bachelor of Arts (without practical subject) | 1 | 450/- | 225/- | 675/- |
| Bachelor of Arts (with one or more practical subjects) | 1 | 500/- | 225/- | 725/- |
| Bachelor of Social Work | 1 | 500/- | 225/- | 725/- |
| Bachelor of Visual Arts | 1 | 2,650/- | 225/- | 2,875/- |
| **FACULTY OF COMMERCE** | | | | |
| Bachelor of Commerce | 1 | 690/- | 225/- | 915/- |
| Bachelor of Business Administration | 1 | 2,150/- | 225/- | 2,375/- |
| Bachelor of Hotel Management | 1 | 2,750/- | 225/- | 2,975/- |

| 1 | 2 | 3 | 4 | 5 |
|---|---|---|---|---|
| COURSE | SEMESTER | WHOLE EXAMINATION FEE including Practical/ Viva-Voce/ Dissertation/Project (in Rs.) | Marks card fee – Rs.150/- Processing fee – Rs. 75/- (Including Scrutiny and e-Governance fee) | Total Fees |
| **FACULTY OF SCIENCE** | | | | |
| Bachelor of Science | 1 | 600/- | 225/- | 825/- |
| Bachelor of Computer Applications | 1 | 2,700/- | 225/- | 2,925/- |
| Bachelor of Audiology, Speech & Language Pathology | 1 | 550/- | 225/- | 775/- |
| Bachelor of Science (Fashion & Apparel Design/Interior Design/Animation | 1 | 2,650/- | 225/- | 2,875/- |

## ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ ಸಲ್ಲಿಕೆ ಮತ್ತು ಶುಲ್ಕ ಪಾವತಿಸುವ ವಿಧಾನಗಳು.

**ಅ. ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ ಮತ್ತು ನಿಯಮಗಳು.**

೧. ವಿದ್ಯಾರ್ಥಿಗಳು **ಆನ್‌ಲೈನ್** ಮುಖಾಂತರ ಪರೀಕ್ಷಾ(**Application for Examination**) ಅರ್ಜಿ ಸಲ್ಲಿಸಲು **studentportal.universitysolutions.in**ನಲ್ಲಿ **login** ಆಗಿ ಪರೀಕ್ಷೆ ತೆಗೆದುಕೊಳ್ಳುವ ಪದವಿಯ ಸೆಮಿಸ್ಟರ್/ವಿಷಯಗಳನ್ನುಗುರುತು ಮಾಡಿ ಪರೀಕ್ಷಾಅರ್ಜಿಯನ್ನು ಸಲ್ಲಿಸಬೇಕು.

೨. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಮಾಡುವುದಕ್ಕೆ ಮುಂಚಿತವಾಗಿಎಲ್ಲಾ ಮಾಹಿತಿಗಳ ನಿಖರತೆಯನ್ನು ಖಾತರಿಪಡಿಸಿಕೊಳ್ಳಬೇಕು.

೩. ವಿದ್ಯಾರ್ಥಿಗಳು ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್‌ನ(**First Year and First Semester**)ಎಲ್ಲಾ ವಿಷಯಗಳನ್ನು ಕಡ್ಡಾಯವಾಗಿ ಪರೀಕ್ಷೆ ತೆಗೆದುಕೊಳ್ಳುವುದು.

೪. ವಿದ್ಯಾರ್ಥಿಗಳು ಪ್ರವೇಶ ಶುಲ್ಕ ಪಾವತಿಸುವುದಕ್ಕೆ ಮುಂಚಿತವಾಗಿ ಪರೀಕ್ಷೆ ಬರೆಯಬೇಕಾದ ವಿಷಯ(Paper)ಗಳನ್ನು ಖಚಿತ ಪಡಿಸಿಕೊಂಡು ದಾಖಲಿಸುವುದು.

**೫. ವಿದ್ಯಾರ್ಥಿಗಳಿಗೆ ಪರೀಕ್ಷೆ ಶುಲ್ಕವನ್ನು ಪಾವತಿ ಮಾಡಲು ವಿದ್ಯಾರ್ಥಿಗಳ ಅನುಕೂಲಕ್ಕೆ ೦೩ ವಿಧಾನಗಳ ಅವಕಾಶಗಳನ್ನು ಕಲ್ಪಿಸಲಾಗಿದೆ.**

- **ವಿದ್ಯಾರ್ಥಿಯು Web Portal ಮುಖಾಂತರ ಬ್ಯಾಂಕ್ ಚಲನ್‌ನ ಪ್ರತಿ ಪಡೆದು,ಕಾಲೇಜು ಜೊತೆತೆರದು ವ್ಯವಹರಿಸುತ್ತಿರುವ ಬ್ಯಾಂಕ್‌ನಲ್ಲಿ ಹಣ ಪಾವತಿಸಿ ನಂತರ ಸಂಬಂಧಿಸಿದ ಚಲನ್ ಪ್ರತಿಯನ್ನುಕಾಲೇಜಿಗೆ ಸಲ್ಲಿಸಬೇಕು. ಈ ವಿಧಾನದಲ್ಲಿಯಾವುದೇ ಸೇವಾ ಶುಲ್ಕವಿರುವುದಿಲ್ಲ.**

  **ವಿ.ಸೂ: ವಿದ್ಯಾರ್ಥಿಗಳು ಈ ಪ್ರಕ್ರಿಯೆಯಲ್ಲಿಏನಾದರೂ ಕಷ್ಟವೆನಿಸಿದರೆ, ಕಾಲೇಜಿನ ಕಛೇರಿಯಿಂದ Web Portal ಮೂಲಕ ಚಲನ್ ಪ್ರತಿ ಪಡೆದುಕೊಳ್ಳುವುದು ಮತ್ತುಕಾಲೇಜು ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು.**
- ವಿದ್ಯಾರ್ಥಿಯು**Web Portal** ಮುಖಾಂತರ**ಅಂಚೆ ಕಛೇರಿಯ** ಚಲನ್ ಸಿದ್ಧಪಡಿಸಿ ಯಾವುದೇ ಅಂಚೆ ಕಛೇರಿಯಲ್ಲಿ ಹಣ ಪಾವತಿಸಬಹುದು. ಈ ವಿಧಾನದಲ್ಲಿ ಸೇವಾ ಶುಲ್ಕವಿರುತ್ತದೆ.
- ವಿದ್ಯಾರ್ಥಿಯು**Web Portal** ಮುಖಾಂತರ**Payment Gateway** ಸೌಲಭ್ಯವನ್ನು ಬಳಸಿಕೊಂಡು (Debit Card/Credit Card/Net Banking/Wallet, ಇತ್ಯಾದಿ) ಹಣ ಪಾವತಿಸಬಹುದು. ಈ ವಿಧಾನದಲ್ಲಿ ಸೇವಾ ಶುಲ್ಕವಿರುತ್ತದೆ.

೬. ವಿದ್ಯಾರ್ಥಿಗಳು ತಮ್ಮ **Web Portal** ನಿಂದ ಪರೀಕ್ಷಾ ಪ್ರವೇಶ ಪತ್ರಿಕೆ(**Hall Ticket**)ಯನ್ನು ಸ್ವತ: ಪಡೆಯಬಹುದು.

**೭. ಪರೀಕ್ಷಾ ಶುಲ್ಕವನ್ನು ಪಾವತಿ ಮಾಡಿದ ಮಾತ್ರಕ್ಕೆ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಬರೆಯುವಅರ್ಹತೆಇದೆಯೆಂದು ಪರಿಗಣಿಸಲಾಗುವುದಿಲ್ಲ.**

| |
|---|
| **ವಿಶೇಷ ಸೂಚನೆ:** ವಿದ್ಯಾರ್ಥಿಗಳುಏನಾದರೂ**Internet Browising Centre** ನ ಮಾಲಿಕರ ಬ್ಯಾಂಕ್‌ಖಾತೆಯ ಮೂಲಕ ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸಿದಲ್ಲಿ ಉಂಟಾಗುವತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು. ಈ ಬಗ್ಗೆ ಅಗತ್ಯಗಮನಹರಿಸುವುದು. |

೮. ಅ.ರೂ.2,50,000/-ಕ್ಕಿಂತಕಡಿಮೆಕುಟುಂಬದ ವಾರ್ಷಿಕಆದಾಯ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹೊಸ(**Fresher**)ವಿದ್ಯಾರ್ಥಿಗಳಿಗೆ (ವಿದ್ಯಾರ್ಥಿವೇತನಕ್ಕೆಅರ್ಜಿ ಸಲ್ಲಿಸಿದ್ದಲ್ಲಿ ಮಾತ್ರ) ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯ್ತಿ ಇರುತ್ತದೆ. ಇಂತಹ ಅಭ್ಯರ್ಥಿಗಳು ಸಂಸ್ಕಾರಣಾ ಶುಲ್ಕ ರೂ.15/- ನ್ನು ಮಾತ್ರ ಪಾವತಿಸಬೇಕು.

೯. ರೂ.2,50,000/-ಕ್ಕಿಂತ ಕಡಿಮೆಕುಟುಂಬದ ವಾರ್ಷಿಕಆದಾಯ ಹೊಂದಿರುವ ಪ್ರವರ್ಗ-೧ರ ಹೊಸ(**Fresher**)ವಿದ್ಯಾರ್ಥಿಗಳು ಹಾಗೂ ರೂ.1,00,000/-ಕ್ಕಿಂತ ಕಡಿಮೆ ಆದಾಯ ಹೊಂದಿರುವ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ೨ಎ, ೩ಎ, ೩ಬಿ, ಗುಂಪಿಗೆ ಸೇರಿದ(**Fresher**)ವಿದ್ಯಾರ್ಥಿಗಳಿಗೆ ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯ್ತಿ ಇರುತ್ತದೆ. ಆಗಸು ಸಂಸ್ಕಾರಣಾ ಶುಲ್ಕ ರೂ.15/-ನ್ನು ಮಾತ್ರ ಪಾವತಿಸಬೇಕು. ಮಾಹಿತಿಗಾಗಿ ಸರ್ಕಾರಿಆದೇಶದ ಪ್ರತಿಯನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಅಂತರ್ಜಾಲದಲ್ಲಿ ಪ್ರಕಟಿಸಿದೆ.

೧೦. ಪ್ರವರ್ಗ-೨ 'ಬಿ'ಗೆ ಸೇರಿದಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿಇರುವುದಿಲ್ಲ ಈ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಲೇಬೇಕು, ಕಾರಣ **ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ: ಎಂಡಬ್ಲ್ಯುಡಿ:೪೦೦:ಎಂಡಿಎಸ್-೨೦೧೪, ದಿನಾಂಕ:೧೭-೧೦-೨೦೧೪ ಇಲಾಖೆ, ಬೆಂಗಳೂರು,** ಇವರು ಸದರಿಆದೇಶದಲ್ಲಿ ಶುಲ್ಕ ವಿನಾಯಿತಿಯನ್ನು ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್‌ಖಾತೆಗೆಜಮಾ ಮಾಡಲಾಗುವುದೆಂದು ತಿಳಿಸಿರುತ್ತಾರೆ.

## ಪ್ರಾಂಶುಪಾಲರು ಗಮನಿಸಬೇಕಾದ ಮತ್ತುಅನುಸರಿಸುವ ಸೂಚನೆಗಳು ಮತ್ತು ಪ್ರಕ್ರಿಯೆಗಳು

೧. ಕಾಲೇಜಿನ ಪ್ರಾಂಶುಪಾಲರು ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು **Web Portal** ಮುಖಾಂತರ ಮಾಡಬೇಕು.

೨. ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೆ ನೊಂದಣಿ ಸಂಖ್ಯೆ(**Register No.**)ಹಾಗೂ ಗುರುತಿನ ಸಂಖ್ಯೆ (**Student ID**) ತಯಾರು ಮಾಡಿ ಕಾಲೇಜುಗಳಿಗೆ ಅಂತರ್ಜಾಲದ ಮುಖಾಂತರ ಕಳುಹಿಸುವುದು.

೩. ಕಾಲೇಜಿನ ಪ್ರಾಂಶುಪಾಲರು, ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಕಟ್ಟುವುದಕ್ಕಿಂತ ಮುಂಚಿತವಾಗಿಎಲ್ಲಾರೀತಿಯ ಅರ್ಹತೆಗಳು **ಮತ್ತು ಹಾಜರಾತಿಯನ್ನು ಹೊಂದಿರುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು.**

೪. ಕಾಲೇಜಿನ ಪ್ರಾಂಶುಪಾಲಲ್ಳು **Web Portal** ಮುಖಾಂತರ ವಿದ್ಯಾರ್ಥಿಗಳ ಪರೀಕ್ಷಾಅರ್ಹತೆಯನ್ನುದೃಡೀಕರಿಸಬೇಕು.

೫. ಕಾಲೇಜಿನ ಪ್ರಾಂಶುಪಾಲರು **Web Portal** ಮುಖಾಂತರ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದರಿಯಾಯಿತಿಯ ಬಗ್ಗೆ ದೃಡೀಕರಿಸಬೇಕು.

೬. ಕಾಲೇಜಿನ ಪ್ರಾಂಶುಪಾಲರು **Web Portal** ಮುಖಾಂತರ ವಿದ್ಯಾರ್ಥಿಗಳ ಪ್ರವೇಶ ಪತ್ರಿಕೆಯ(**Hall ticket**)ತಡೆಯ ಬಗ್ಗೆ ದೃಡೀಕರಿಸಬೇಕು.

೭. ಕಾಲೇಜುಗಳು ದೃಡೀಕರಿಸಿದ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ **Web Portal** ಮುಖಾಂತರ ತಿಳಿಸಲಾಗುವುದು.

೮. ಕಾಲೇಜಿನ ಪ್ರಾಂಶುಪಾಲರು **Web Portal** ಮುಖಾಂತರತಮ್ಮಕಾಲೇಜಿನ ಬ್ಯಾಂಕ್ ವಿವರಗಳನ್ನು ಒದಗಿಸಬೇಕು, ವಿವರಗಳು ಲಭ್ಯವಿಲ್ಲದಿದ್ದಲ್ಲಿ ವಿದ್ಯಾರ್ಥಿಗಳು ಕಾಲೇಜಿನಬ್ಯಾಂಕ್‌ನಲ್ಲಿ ಪರೀಕ್ಷಾ ಶುಲ್ಕವನ್ನು ಪಾವತಿ ಮಾಡಲುಅವಕಾಶವಿರುವುದಿಲ್ಲ.

೯. ವಿದ್ಯಾರ್ಥಿಗಳು ಪಾವತಿಸಿದಪರೀಕ್ಷಾ ಶುಲ್ಕದ ವಿವರಗಳು ಆಯಾಕಾಲೇಜಿನ **Web Portal** ನಲ್ಲಿ ಲಭ್ಯವಿರುತ್ತದೆ.

೧೦. ಕಾಲೇಜಿನ ಬ್ಯಾಂಕ್‌ನಲ್ಲಿ ವಿದ್ಯಾರ್ಥಿಗಳು ಸಂದಾಯ ಮಾಡಿದ ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ಕಾಲೇಜುಗಳು ನಿಗದಿತ ದಿನಾಂಕದೊಳಗೆ **Payment Gateway** ಮುಖಾಂತರ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕು.

೧೨. ಅವಶ್ಯವಿದ್ದ ಮತ್ತು ನಿಯಮಗಳ ರೀತಿ ಅನಿವಾರ್ಯ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರಿಕೆಯನ್ನು(**Hall ticket**)ಕಾಲೇಜುಗಳು ಮುದ್ರಿಸಿ ಒದಗಿಸತಕ್ಕದ್ದು.

೧೩. ವಿಶ್ವವಿದ್ಯಾನಿಲಯವು ಕಾಲೇಜುಗಳಿಗೆ ಒದಗಿಸುವ ಪ್ರಶ್ನೆ ಪತ್ರಿಕೆಗಳ ಸಂಖ್ಯೆಯನ್ನು **Web Portal** ಮುಖಾಂತರ ತಿಳಿಸುವುದು. ಕಾಲೇಜುಗಳು ಇದನ್ನು ಪರಿಶೀಲಿಸಿ ಯಾವುದಾದರು ವ್ಯತ್ಯಯವಿದ್ದರೆಅದನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಗಮನಕ್ಕೆ ತರುವುದು.

೧೪. ಕಾಲೇಜಿಗೆ ಸಂಬಂಧಪಟ್ಟಂತೆ ವಿವಿಧ ಪದವಿ ಹಾಗೂ ಕೋರ್ಸ್‌ಗಳಿಗೆ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಪಟ್ಟಿಯನ್ನು(**Candidate List**) **Web Portal** ಮುಖಾಂತರಒದಗಿಸಲಾಗುವುದು.

೧೫. ಪ್ರಾಯೋಗಿಕ ಪರೀಕ್ಷೆಯ(**Practical Exam**)ತಯಾರಿಯನ್ನುಕಾಲೇಜಿನ **Web Portal** ಮುಖಾಂತರವೇ ಮಾಡುವುದು.

೧೬. ಪ್ರಾಯೋಗಿಕ ಪರೀಕ್ಷೆಯ **Batch Preparation** ಹಾಗೂ ಅಂಕಗಳ ದಾಖಲಾತಿಯನ್ನು **Web Portal** ಮುಖಾಂತರವೇ ಮಾಡುವುದು.

೧೭.ಪರೀಕ್ಷಾಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೊಠಡಿಗಳನ್ನು (**Room Allotment**) ಆನ್‌ಲೈನ್‌ಮೂಲಕ ನಿಗದಿಪಡಿಸಿಕೊಳ್ಳುವುದು.

೧೮. **Invigilator Dairy** ಯನ್ನು (೦೨ ಪ್ರತಿಗಳು) ಆನ್‌ಲೈನ್ ಮೂಲಕವೇ ಸಿದ್ದಪಡಿಸಿಕೊಳ್ಳಬೇಕು ಹಾಗೂ ಆಯಾ ದಿನದಉತ್ತರ ಪತ್ರಿಕೆ ಬಂಡಲ್‌ಗಳ ಜೊತೆಯಲ್ಲಿಯೇ ೦೧ ಪ್ರತಿಯನ್ನು ಕಳುಹಿಸಿಕೊಡುವುದು.

೧೯. ಪರೀಕ್ಷೆಗೆಗೈರುಹಾಜರಾದ ವಿದ್ಯಾರ್ಥಿಗಳ ನೊಂದಣಿ ಸಂಖ್ಯೆ ಮತ್ತು ವಿಷಯವನ್ನು(**Subject including QP Code**) ಆನ್‌ಲೈನ್ ಮೂಲಕವೇ ನಮೂದಿಸುವುದು.

೨೦. ಪ್ರಾಚಾರ್ಯರುಗಳು ಪರೀಕ್ಷಾ ಶುಲ್ಕ / ಇತರೆ ಶುಲ್ಕಗಳ ಮರುಭರಿಕೆಗೆ ಸಂಬಂಧಿಸಿದಂತೆ, **ಸರ್ಕಾರಿಆದೇಶ ಸಂಖ್ಯೆ:ಹಿವಿಕ:೫೪೯:ಬಿಎಂಎಸ್:೨೦೧೩:ಇಲಾಖೆ, ಬೆಂಗಳೂರು, ಇವರ ದಿನಾಂಕ:೦೫-೧೦-೨೦೧೩ರ** ಪ್ರಕಾರ ವಿಧ್ಯಾರ್ಥಿಗಳಿಗೆ ಶುಲ್ಕ ಮರುಭರಿಕೆಗೆಕ್ರಮ ಕೈಗೊಳ್ಳತಕ್ಕದ್ದು.

೨೧. ಪ್ರಾಚಾರ್ಯರುಗಳು ಪರೀಕ್ಷಾ ಶುಲ್ಕ / ಇತರೆ ಶುಲ್ಕಗಳ ಮರುಭರಿಕೆಗೆ ಸಂಬಂಧಿಸಿದಂತೆ, ಆಯುಕ್ತರಕಛೇರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು, ಇವರ**ಸಂಖ್ಯೆ: ಹಿಂವಕಇ/ಶುವಿ/ಸಿ.ಆರ್-೩೪:೨೦೧೪-೧೫, ದಿನಾಂಕ:೧೯-೦೯-೨೦೧೪ರ** ಪ್ರಕಾರ ವಿಧ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಿರುವ ವಿಧ್ಯಾರ್ಥಿಗಳ ಶುಲ್ಕ ಮರುಭರಿಕೆ ಹಣವನ್ನುಪ್ರಾಂಶುಪಾಲರ ಬ್ಯಾಂಕ್ಖಾತೆಗೆಜಮಾ ಮಾಡಲಾಗುವುದೆಂದು ತಿಳಿಸಿರುತ್ತಾರೆ. ಆದ್ದರಿಂದ ಶುಲ್ಕ ಮರುಭರಿಕೆಯಾದ ನಂತರಕೂಡಲೇ ಸದರಿ ಮೊತ್ತವನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದಖಾತೆಗೆಜಮಾ ಮಾಡಲು ಕ್ರಮ ಕೈಗೊಳ್ಳತ್ತಕ್ಕದ್ದು.

೨೨. **ಪರೀಕ್ಷಾ ಶುಲ್ಕ ವಿನಾಯ್ತಿ ಪಡೆದ (ಪ್ರವರ್ಗ-೧,೨ಎ,೩ಎ,೩ಬಿ), ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿಧ್ಯಾರ್ಥಿಗಳ ಪಟ್ಟಿಯನ್ನುಫಜಥ Portal** ಮುಖಾಂತರ ಸಿದ್ದಪಡಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು.

೨೩. ನಿಯಮಾನುಸಾರ ವಿಶ್ವವಿದ್ಯಾನಿಲಯವು ಪ್ರವೇಶವನ್ನುಅನುಮೋದನೆ ನೀಡಿರುವ ವಿಧ್ಯಾರ್ಥಿಗಳಿಂದ ಮಾತ್ರ ಪರೀಕ್ಷಾಅರ್ಜಿ ಹಾಗೂ ಶುಲ್ಕ ಸಂಗ್ರಹಿಸಬೇಕು. ನಿಯಮಗಳ ರೀತಿ ವಿದ್ಯಾರ್ಥಿಗಳ ಅವಶ್ಯಹಾಜರಾತಿ ಹಾಗೂ ಇತರೆ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಾಚಾರ್ಯರೇಜವಾಬ್ದಾರರು.

೨೪. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿಧ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪ್ರಾಚಾರ್ಯರು ಸಂಬಂಧಿಸಿದ ವಿಧ್ಯಾರ್ಥಿಗಳಿಗೆ ಸರ್ಕಾರ ನೀಡುವ ವಿಧ್ಯಾರ್ಥಿ ವೇತನದಲ್ಲಿಕಡ್ಡಾಯವಾಗಿ ಕಟಾಯಿಸಿ ಎಲ್ಲಾ ವಿವರಗಳೊಂದಿಗೆ ವಿಶ್ವವಿದ್ಯಾನಿಲಯಖಾತೆಗೆಜಮಾ ಮಾಡಲು ಕ್ರಮ ಕೈಗೊಳ್ಳತಕ್ಕದ್ದು.

೨೫.**ಆಂತರಿಕ ಅಂಕಗಳ (Internal Marks list) ಪಟ್ಟಿಯನ್ನುಕಡ್ಡಾಯವಾಗಿ ಮತ್ತು ಸಮರ್ಪಕವಾಗಿ ಪರಿಶೀಲಿಸಿ ನಿಗದಿತ ದಿನಾಂಕದೊಳಗೆ Onlineಮುಖಾಂತರಸಲ್ಲಿಸಬೇಕು. ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಂತರಯಾವುದೇತಿದ್ದುಪಡಿ / ಮಾರ್ಪಾಡುಗಳಿಗೆ ಅವಕಾಶ ಇರುವುದಿಲ್ಲ.**

೨೬.ಮುದ್ರಿತನಮೂನೆಗಳು (ಸೈದ್ಧಾಂತಿಕ/ಪ್ರಾಯೋಗಿಕ) ಹಾಗೂ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಯನ್ನು ನಿಗದಿತ ದಿನಾಂಕದೊಳಗೆ ವಿಶ್ವವಿದ್ಯಾನಿಲಯಕ್ಕೆತಪ್ಪದೇ ಸಲ್ಲಿಸತಕ್ಕದ್ದು.

೨೭. ಅರ್ಹರಲ್ಲದ ಮತ್ತುಪರೀಕ್ಷಾ ಶುಲ್ಕ ಪಾವತಿಸದೇಇರುವ ವಿಧ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲುಅನುಮತಿ ನೀಡಿದರೆ, ಅಂತಹ ಲೋಪಗಳಿಗೆಕಾಲೇಜಿನ ಪ್ರಾಂಶುಪಾಲರೇ ನೇರಜವಾಬ್ದಾರರು.

೨೮. ಪ್ರಸ್ತುತ ಸಾಲಿನಲ್ಲಿ ಪ್ರವೇಶ ಪಡೆದು ವಿಶ್ವವಿದ್ಯಾನಿಲಯದಿಂದ ಪ್ರವೇಶಾತಿಅನುಮೋದನೆಗೊಂಡ ವಿಧ್ಯಾರ್ಥಿಗಳನ್ನು ಮಾತ್ರ ಪರೀಕ್ಷೆಗೆ ಹಾಜರು ಪಡಿಸುವ ಹೊಣೆಕಾಲೇಜಿನ ಪ್ರಾಂಶುಪಾಲರದ್ದಾಗಿರುತ್ತದೆ. ತಪ್ಪಿದಲ್ಲಿತಮ್ಮನ್ನೆ ನೇರ ಹೊಣೆಗಾರರು.

೨೯. ಪರೀಕ್ಷೆಗೆಗೈರು ಹಾಜರಾದ ವಿಧ್ಯಾರ್ಥಿಗಳ ಪಟ್ಟಿಯನ್ನು**(Absentee Statement)Invigilator Dairy** ಜೊತೆಆಯಾ ದಿನದಂದೇ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಬೇಕು.

೩೦.ಪರೀಕ್ಷೆ ಕಾರ್ಯಗಳಿಗೆ ಸಂಬಂಧಿಸಿದಂತೆ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿ ಇರುವಇತರೆ ನಿಯಮಗಳು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆಅನ್ವಯವಾಗುವುದು.

**ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: ೬೩೬೩೩೨೯೫೪೭ / ೬೩೬೩೩೧೯೬೪೬ / ೬೩೬೩೩೨೭೦೨೯ ಗೆ ಸಂಪರ್ಕಿಸಬಹುದು.**

5/11/18

**ಕುಲಸಚಿವರು (ಪರೀಕ್ಷಾಂಗ)**

**ಅಡಕ:** ಪರೀಕ್ಷಾ ಶುಲ್ಕ ವಿನಾಯಿತಿಗೆ ಸಂಬಂಧಿಸ**ಸರ್ಕಾರದ ಮಾಹಿತಿಯನ್ನು** ಈ ಪತ್ರದೊಂದಿಗೆ ಲಗ್ಗತಿಸಿದೆ. ಇದನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಹಾಗೂ ವಿಧ್ಯಾರ್ಥಿಗಳ ಗಮನಕ್ಕೆ ತರಲು ತಿಳಿಸಲಾಗಿದೆ.

ಗೆ,

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಎಲ್ಲಾ ಕಾಲೇಜು ಪ್ರಾಂಶುಪಾಲರುಗಳಿಗೆ

**ಪ್ರತಿ:**

೧. ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಕೋಲಾರ / ಚಿಕ್ಕಬಳ್ಳಾಪುರ / ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು.

೨. ಆಪ್ತ ಶಾಖೆ, ಮಾನ್ಯ ಕುಲಪತಿಗಳು / ಕುಲಸಚಿವರು (ಆಡಳಿತ) / ಕುಲಸಚಿವರು (ಪರೀಕ್ಷಾಂಗ) / ವಿತ್ತಾಧಿಕಾರಿಗಳು (ಪ್ರಭಾರ), ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಶ್ರೀ ದೇವರಾಜಅರಸು ಬಡಾವಣೆ, ಟಮಕ, ಕೋಲಾರ– ೫೬೩ ೧೦೩.

೩. ಕಛೇರಿ ಪ್ರತಿ.